ದಿನಾಂಕಃ 27.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಹತ್ತನೇ ತರಗತಿ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ಜಮೀನ್ದಾರ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನನಗೆ 8 ವರ್ಷದಿಂದ ಪರಿಚಯ. ನನ್ನ ಹೆಂಡತಿಯ ಹೆಸರು ವೈ.ಹೆಚ್ ಮಂಜುಳ. ದಿಃ 29.04.2016 ರಲ್ಲಿ ಸರ್ವೆ ನಂ. 34/1 ರಲ್ಲಿ 1 ಮತ್ತು 2 ನೇ ಪ್ರತಿವಾದಿ ಕಡೆಯಿಂದ ನನ್ನ ಹೆಂಡತಿಯ ಹೆಸರಿಗೆ ಕ್ರಯದ ಕರಾರನ್ನು ರೂ. 3,80,000 ಗಳಿಗೆ ಮಾಡಿಸಿಕೊಂಡಿದ್ದು ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾರಿಯ ಸಮಸ್ಯೆ ಇದ್ದ ಕಾರಣ ಅದನ್ನು ಮುಂದುವರೆಸಲಿಲ್ಲ ಎಂದು ನುಡಿದಿರುತ್ತಾರೆ. ದಿಃ 30.06.2017 ರಲ್ಲಿ ಸದರಿ ಕ್ರಯದ ಕರಾರನ್ನು ರದ್ದು ಪಡಿಸಿಕೊಂಡಿದ್ದೆ ಎಂದರೆ ಸರಿ. ಸಾಕ್ಷಿಗೆ ದಿಃ 30.06.2017 ರ ಗಣಕೀಕೃತ ಕ್ರಯದ ಕರಾರಿನ ರದ್ದತಿ ಪತ್ರವನ್ನು ತೋರಿಸಲಾಗಿ ಅದನ್ನು ಅವರು ಒಪ್ಪಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರ ವ್ಯವಹಾರ ಮಾಡುವಾಗ ನಾನು ನನ್ನ ಹೆಂಡತಿಯ ಜೊತೆಯಲ್ಲಿ ಇದ್ದೆ ಎಂದರೆ ಸರಿ. ನಿಪಿ-1 ರ ಸಾಕ್ಷಿಗಳು ನನಗೆ ವಿಶ್ವಾಸ ಎಂದರೆ ಸಾಕ್ಷಿಯು ಪರಿಚಯ ಎಂದು ನುಡಿಯುತ್ತಾರೆ. ಬಡ್ಡಿ ವ್ಯವಹಾರ ಭದ್ರತೆಗಾಗಿ ನಿಪಿ-1 ಅನ್ನು ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನೀಡಿದ ಹಣಕೋಸ್ಕರ ನಿಪಿ-1 ಅನ್ನು ಬರೆದು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ

ವಿಚಾರಣ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಯಾವುದೇ ನೋಟಿಸ್ಸನ್ನು ಕಳುಹಿಸಿಲ್ಲ ಎಂದರೆ ಸರಿಯಲ್ಲ.

3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಲಾವಾಕಾಶ ಕೋರಲಾಗಿ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.